ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ರೋಣ

ಸಿ.ಸಿ. ನಂ. 198/2021

ಸಿ.ಡಬ್ಲೂಃ 9 ಪಿ.ಡಬ್ಲೂಃ 6

ಹೆಸರುಃ ವೀರಪ್ಪ ಕುದರಿ

ತಂದೆಯ ಹೆಸರುಃ ಬಸವಂತಪ್ಪ

ವಯಸ್ಸುಃ 61 ವರ್ಷ

ಉದ್ಯೋಗಃ ನಿವೃತ್ತ ಸಹ ಶಿಕ್ಷಕರು

ವಿಳಾಸಃ ಗಜೇಂದ್ರಗಡ

**ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 03-06-2026 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

ನಾನು ನಿವೃತ್ತಿ ಆಗುವ ಮುಂಚೆ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ನಂಬರ-2 ಗಜೇಂದ್ರಗಡದಲ್ಲಿ ಸಹ ಶಿಕ್ಷಕ ಎಂದು ಕರ್ತವ್ಯ ನಿರ್ವಹಿಸಿದ್ದೇನೆ. ದಿಃ 31-01-2020 ರಂದು ನಾವು ಶಾಲೆಯಲ್ಲಿ ಕೆಲಸ ಮುಗಿಸಿಕೊಂಡು ಸಂಜೆ 05.00 ಗಂಟೆ ಸುಮಾರಿಗೆ ಶಾಲೆಯ ಬೀಗ ಹಾಕಿಕೊಂಡು ಹೋಗಿದ್ದೇವು. ಆಗ ಪ್ರಭಾರಿ ಮುಖ್ಯ ಶಿಕ್ಷಕರಾದ ರಾಚಪ್ಪ ಅಂಗಡಿಯವರು ರಜಾ ಇದ್ದ ಕಾರಣ incharge ಆಗಿ ಶ್ರೀಮತಿ. ರೇಣುಕಾದೇವಿ ನಾಯಕ ಸಹ ಶಿಕ್ಷಕರವರಿಗೆ ವಹಿಸಿಕೊಟ್ಟಿದ್ದರು. ಆ ದಿನ ಶ್ರೀಮತಿ. ರೇಣುಕಾದೇವಿ ನಾಯಕ, ನಾನು ಮತ್ತು ನಮ್ಮ ಸಹ ಶಿಕ್ಷಕರ ಸಿಬ್ಬಂದಿ ವರ್ಗದವರು ಇದ್ದೇವು. ಮರು ದಿನ ದಿಃ 01-02-2020 ರಂದು ಶನಿವಾದ ಇದ್ದ ಕಾರಣ ಬೆಳಿಗ್ಗೆ 07.30 ಗಂಟೆ ಸುಮಾರಿಗೆ ಪ್ರಭಾರಿ ಮುಖ್ಯ ಶಿಕ್ಷರಾದ ರಾಚಪ್ಪ ರವರು ಮೊದಲು ಶಾಲೆಗೆ ಬಂದಿದ್ದು ನಂತರ ನಾವು ಬಂದಿರುತ್ತೇವೆ. ನಾವು ಬಂದು ನೋಡಲಾಗಿ ನಮ್ಮ ಶಾಲೆಯ ಕಚೇರಿಯ ಬಾಗಿಲು ಒಡೆದಿತ್ತು. ಸದರಿ ವಿಷಯವನ್ನು ನಮ್ಮ SDMC ಸದಸ್ಯರಿಗೂ ಮತ್ತು ಪೊಲೀಸರಿಗೂ ಸಹ ನಾವು ತಿಳಿಸಿರುತ್ತೇವೆ. ನಂತರ ನಾವು ಒಳಗಡೆ ಹೋಗಿ ನೋಡಲಾಗಿ ಮಕ್ಕಳಿಗೆ ಉಪಯೋಗಿಸು ಹಾಲಿನ ಪುಡಿ ಪಾಕೇಟಗಳು ಮತ್ತು ತೊಗರಿ ಬೆಳೆ ಇಲ್ಲದಿರುವುದು ಕಂಡುಬಂದಿರುತ್ತದೆ. 1 ಕೆ.ಜಿಯ ಸುಮಾರು 65 ಹಾಲಿನ ಪುಡಿ ಪಾಕೆಟಗಳು ಮತ್ತು 50 ಕೆ.ಜಿಯ 2 ತೊಗರಿ ಬೆಳೆ ತುಂಬಿದ ಚೀಲಗಳು ಕಳ್ಳತನವಾಗಿದ್ದವು. ನಮ್ಮ ಪ್ರಭಾರಿ ಶಿಕ್ಷರಾದ ರಾಚಪ್ಪ ರವರು ದೂರನ್ನು ನೀಡಿರುತ್ತಾರೆ.

2. ಒಂದು ವರ್ಷದ ನಂತರ ಕಳ್ಳರು ಸಿಕ್ಕಿದ್ದಾರೆ ಎಂದು ನಮಗೆ ಗೊತ್ತಾಯಿತು. ಈ ದಿನ ನ್ಯಾಯಾಲಯದಲ್ಲಿ ಹಾಜರು ಇರುವ 1 ಮತ್ತು 2 ನೇ ಆರೋಪಿತರನ್ನು ಪೊಲೀಸರು ನಮ್ಮ ಶಾಲೆಗೆ ಕರೆದುಕೊಂಡು ಬಂದಿದ್ದರು. ದಿನಾಂಕ ನೆನಪಿಲ್ಲ. ನಮ್ಮ ಸಮಕ್ಷಮ 1 ಮತ್ತು 2 ನೇ ಆರೋಪಿತರು ಹಾಲಿನ ಪುಡಿ ಪಾಕೇಟಗಳು, ತೊಗರಿ ಬೆಳೆ, ಮೈಕ ಸೇಟ ಮತ್ತು bio metric ಅನ್ನು ನಮ್ಮ ಶಾಲೆಯಿಂದ ಕಳ್ಳತನ ಮಾಡಿದ ಬಗ್ಗೆ ಒಪ್ಪಿಕೊಂಡಿರುವರು.

**ಪಾಟೀ ಸವಾಲು : ಶ್ರೀ.SBH 1 ಮತ್ತು 3 ನೇ ಆರೋಪಿತರ ಪರ ವಕೀಲರಿಂದ**

ನಮ್ಮ ಪ್ರಭಾರಿ ಮುಖ್ಯ ಶಿಕ್ಷಕರು ಆದಿನ ಶಾಲೆಗೆ ಮೊದಲು ಬಂದಿರುತ್ತಾರೆ. ನಮ್ಮ ಶಾಲೆಯಲ್ಲಿ ನಿರ್ವಹಣೆ ಮಾಡುವ ರಿಜಿಸ್ಟರನಲ್ಲಿ ನಮೂದಿಸಿದಂತೆ ಶಾಲೆಯಲ್ಲಿ ಎಷ್ಟು ಹಾಲಿನ ಪುಡಿ ಪಾಕೇಟಗಳು ಮತ್ತು ತೊಗರಿ ಬೆಳೆ ಇದ್ದವು ಎಂದು ನನಗೆ ಮಾಹಿತಿ ಇಲ್ಲ. ನಮ್ಮ ಶಾಲೆಯ ಕಚೇರಿಯ ಮುಖ್ಯ ಬಾಗಿಲಿಗೆ ಹಾಕಿದ ಬೀಗದ ಚಾವಿ ನಮ್ಮ ಮುಖ್ಯ ಶಿಕ್ಷಕರ ಬಳಿ ಇರುತ್ತದೆ ಎಂದರೆ ಸರಿ. ಕಳ್ಳತನವಾಗಿದ್ದವು ಎಂದು ಹೇಳುವ ಹಾಲಿನ ಪುಡಿ ಪಾಕೆಟಗಳು ಮತ್ತು ತೊಗರಿಬೆಳೆ ಶಾಲೆಯಲ್ಲಿ ಇದ್ದ ಬಗ್ಗೆ ನಮ್ಮ ಮುಖ್ಯ ಶಿಕ್ಷಕರಿಗೆ ನಾನು ವಿಚಾರಿಸಿಲ್ಲ. ಕಳ್ಳತನವಾದ ಸಂದರ್ಬದಲ್ಲಿ ನಮ್ಮ ಶಾಲೆಗೆ ಸಿಸಿಟಿವಿ ಕ್ಯಾಮರಾ ಅಳವಡಿಸಿರಲಿಲ್ಲ. ನಾವು ಮರುದಿನ ಶಾಲೆಗೆ ಹೋದಾಗ ನಾವು, ಸಿಬ್ಬಂದಿಯವರು ಮತ್ತು ವಿದ್ಯಾರ್ಥಿಗಳು ಇದ್ದೇವು. ಯಾವುದೇ ಘಟನೆಯಾಗದೇ ಇದ್ದರೂ ನಮ್ಮ ಮುಖ್ಯ ಶಿಕ್ಷಕರ ಮತು ಕೇಳಿ ಹಾಗೂ ಆರೋಪಿತರಿಗೆ ಆಗದವರ ಮಾತು ಕೇಳಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ಮತ್ತು ಮುಖ್ಯ ಶಿಕ್ಷಕರು ಹೇಳಿದ ಮೇರೆಗೆ ಆರೋಪಿತರು ನಮ್ಮ ಶಾಲೆಗೆ ಬಂದು ಕಳ್ಳತನ ಮಾಡಿದ ಬಗ್ಗೆ ಒಪ್ಪಿಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಜರ ಮಾಡಿದ ದಿನಾಂಕ ನೆನಪಿಲ್ಲ. ಪಂಚನಾಮೆಯನ್ನು ಯಾರು ಬರೆದರು ಎಂದು ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಮರು ಹೇಳಿಕೆ ನೀಡಿಲ್ಲ. ಆರೋಪಿತರಿಗೂ, ಮು.ಮಾ ಗೂ ಮತ್ತು ಘಟನೆಗೂ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನಮ್ಮ ಶಾಲೆಗೆ ಹಾಕಿದ್ದ ಬೀಗವನ್ನು ನಮ್ಮ ಮುಂದೆ ಜಪ್ತುಪಡಿಸಿಕೊಂಡಿಲ್ಲ. ಪೊಲೀಸರು ಸ್ಥಳದಲ್ಲಿ ಪೋಟೊ ತೆಗೆದಿರುತ್ತಾರೆ.

**ಪಾಟೀ ಸವಾಲು : ಶ್ರೀ.RNB 2 ನೇ ಆರೋಪಿ ಪರ ವಕೀಲರಿಂದ**

1 ಮತ್ತು 3 ನೇ ಆರೋಪಿತರ ಪರ ವಕೀಲರು ಮೇಲಿನಂತೆ ಕೈಗೊಂಡ ಪಾಟೀ ಸವಾಲನ್ನು ಅಳವಡಿಸಿಕೊಂಡಿರುವರು.

ಮರುವಿಚಾರಣೆ ಇಲ್ಲಃ

**( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು )**

ಓ.ಹೇ.ಕೇ. ಸರಿ ಇದೆ,

Sd/-

(ಹುಲುಗಪ್ಪ. ಡಿ )

ಪ್ರಧಾನ  ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ

ನ್ಯಾಯಾಧೀಶರು ರೋಣ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ರೋಣ

ಸಿ.ಸಿ. ನಂ. 198/2021

ಸಿ.ಡಬ್ಲೂಃ 8 ಪಿ.ಡಬ್ಲೂಃ 5

ಹೆಸರುಃ ತಿಪ್ಪಣ್ಣ ಚಳ್ಳಮರದ

ತಂದೆಯ ಹೆಸರುಃ ಶಂಕ್ರಪ್ಪ

ವಯಸ್ಸುಃ 60 ವರ್ಷ

ಉದ್ಯೋಗಃ ನಿವೃತ್ತ ಶಿಕ್ಷಕರು

ವಿಳಾಸಃ ಗಜೇಂದ್ರಗಡ

**ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 03–06–2026 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

ನಾನು ನಿವೃತ್ತಿ ಆಗುವ ಮುಂಚೆ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ನಂಬರ-2 ಗಜೇಂದ್ರಗಡದಲ್ಲಿ ಸಹ ಶಿಕ್ಷಕ ಎಂದು ಕರ್ತವ್ಯ ನಿರ್ವಹಿಸಿದ್ದೇನೆ. ದಿಃ 31-01-2020 ರಂದು ನಾವು ಶಾಲೆಯಲ್ಲಿ ಕೆಲಸ ಮುಗಿಸಿಕೊಂಡು ಸಂಜೆ 05.00 ಗಂಟೆ ಸುಮಾರಿಗೆ ಶಾಲೆಯ ಬೀಗ ಹಾಕಿಕೊಂಡು ಹೋಗಿದ್ದೇವು. ಆಗ ಪ್ರಭಾರಿ ಮುಖ್ಯ ಶಿಕ್ಷಕರಾದ ರಾಚಪ್ಪ ಅಂಗಡಿಯವರು ರಜಾ ಇದ್ದ ಕಾರಣ incharge ಆಗಿ ಶ್ರೀಮತಿ. ರೇಣುಕಾದೇವಿ ನಾಯಕ ಸಹ ಶಿಕ್ಷಕರವರಿಗೆ ವಹಿಸಿಕೊಟ್ಟಿದ್ದರು. ಆ ದಿನ ಶ್ರೀಮತಿ. ರೇಣುಕಾದೇವಿ ನಾಯಕ, ನಾನು ಮತ್ತು ನಮ್ಮ ಸಹ ಶಿಕ್ಷಕರ ಸಿಬ್ಬಂದಿ ವರ್ಗದವರು ಇದ್ದೇವು. ಮರು ದಿನ ದಿಃ 01-02-2020 ರಂದು ಶನಿವಾದ ಇದ್ದ ಕಾರಣ ಬೆಳಿಗ್ಗೆ 07.30 ಗಂಟೆ ಸುಮಾರಿಗೆ ಪ್ರಭಾರಿ ಮುಖ್ಯ ಶಿಕ್ಷರಾದ ರಾಚಪ್ಪ ರವರು ಮೊದಲು ಶಾಲೆಗೆ ಬಂದಿದ್ದು ನಂತರ ನಾವು ಬಂದಿರುತ್ತೇವೆ. ನಾವು ಬಂದು ನೋಡಲಾಗಿ ನಮ್ಮ ಶಾಲೆಯ ಕಚೇರಿಯ ಬಾಗಿಲು ಒಡೆದಿತ್ತು. ಸದರಿ ವಿಷಯವನ್ನು ನಮ್ಮ SDMC ಸದಸ್ಯರಿಗೂ ಮತ್ತು ಪೊಲೀಸರಿಗೂ ಸಹ ನಾವು ತಿಳಿಸಿರುತ್ತೇವೆ. ನಂತರ ನಾವು ಒಳಗಡೆ ಹೋಗಿ ನೋಡಲಾಗಿ ಮಕ್ಕಳಿಗೆ ಉಪಯೋಗಿಸು ಹಾಲಿನ ಪುಡಿ ಪಾಕೇಟಗಳು ಮತ್ತು ತೊಗರಿ ಬೆಳೆ ಇಲ್ಲದಿರುವುದು ಕಂಡುಬಂದಿರುತ್ತದೆ. 1 ಕೆ.ಜಿಯ ಸುಮಾರು 65 ಹಾಲಿನ ಪುಡಿ ಪಾಕೆಟಗಳು ಮತ್ತು 50 ಕೆ.ಜಿಯ 2 ತೊಗರಿ ಬೆಳೆ ತುಂಬಿದ ಚೀಲಗಳು ಕಳ್ಳತನವಾಗಿದ್ದವು. ನಮ್ಮ ಪ್ರಭಾರಿ ಶಿಕ್ಷರಾದ ರಾಚಪ್ಪ ರವರು ದೂರನ್ನು ನೀಡಿರುತ್ತಾರೆ.

2. ಬಹಳ ದಿನಗಳ ನಂತರ ಕಳ್ಳರು ಸಿಕ್ಕಿದ್ದಾರೆ ಎಂದು ನಮಗೆ ಗೊತ್ತಾಯಿತು. ಈ ದಿನ ನ್ಯಾಯಾಲಯದಲ್ಲಿ ಹಾಜರು ಇರುವ 1 ಮತ್ತು 2 ನೇ ಆರೋಪಿತರನ್ನು ಪೊಲೀಸರು ಮಹಜರಗಾಗಿ ನಮ್ಮ ಶಾಲೆಗೆ ಕರೆದುಕೊಂಡು ಬಂದಿದ್ದರು. ದಿನಾಂಕ ನೆನಪಿಲ್ಲ. ನಮ್ಮ ಸಮಕ್ಷಮ 1 ಮತ್ತು 2 ನೇ ಆರೋಪಿತರು ಹಾಲಿನ ಪುಡಿ ಪಾಕೇಟಗಳು, ತೊಗರಿ ಬೆಳೆ, ಮೈಕ ಸೇಟ ಮತ್ತು bio metric ಅನ್ನು ನಮ್ಮ ಶಾಲೆಯಿಂದ ಕಳ್ಳತನ ಮಾಡಿದ ಬಗ್ಗೆ ಒಪ್ಪಿಕೊಂಡಿರುವರು.

**<u>ಪಾಟೀ ಸವಾಲು : ಶ್ರೀ.SBH 1 ಮತ್ತು 3 ನೇ ಆರೋಪಿತರ ಪರ ವಕೀಲರಿಂದ</u>**

ನಮ್ಮ ಪ್ರಭಾರಿ ಮುಖ್ಯ ಶಿಕ್ಷಕರು ಆದಿನ ಶಾಲೆಗೆ ಮೊದಲು ಬಂದಿರುತ್ತಾರೆ. ನಮ್ಮ ಶಾಲೆಯಲ್ಲಿ ನಿರ್ವಹಣೆ ಮಾಡುವ ರಿಜಿಸ್ಟರನಲ್ಲಿ ನಮೂದಿಸಿದಂತೆ ಶಾಲೆಯಲ್ಲಿ ಎಷ್ಟು ಹಾಲಿನ ಪುಡಿ ಪಾಕೇಟಗಳು ಮತ್ತು ತೊಗರಿ ಬೆಳೆ ಇದ್ದವು ಎಂದು ನನಗೆ ಮಾಹಿತಿ ಇಲ್ಲ. ನಮ್ಮ ಶಾಲೆಯ ಕಚೇರಿಯ ಮುಖ್ಯ ಬಾಗಿಲಿಗೆ ಹಾಕಿದ ಬೀಗದ ಚಾವಿ ನಮ್ಮ ಮುಖ್ಯ ಶಿಕ್ಷಕರ ಬಳಿ ಇರುತ್ತದೆ ಎಂದರೆ ಸರಿ. ಕಳ್ಳತನವಾಗಿದ್ದವು ಎಂದು ಹೇಳುವ ಹಾಲಿನ ಪುಡಿ ಪಾಕೆಟಗಳು ಮತ್ತು ತೊಗರಿಬೆಳೆ ಶಾಲೆಯಲ್ಲಿ ಇದ್ದ ಬಗ್ಗೆ ನಮ್ಮ ಮುಖ್ಯ ಶಿಕ್ಷಕರಿಗೆ ನಾನು ವಿಚಾರಿಸಿಲ್ಲ. ಕಳ್ಳತನವಾದ ಸಂದರ್ಬದಲ್ಲಿ ನಮ್ಮಶಾಲೆಗೆ ಸಿಸಿಟಿವಿ ಕ್ಯಾಮರಾ ಅಳವಡಿಸಿರಲಿಲ್ಲ. ನಾವು ಮರುದಿನ ಶಾಲೆಗೆ ಹೋದಾಗ ನಾವು, ಸಿಬ್ಬಂದಿಯವರು ಮತ್ತು ವಿದ್ಯಾರ್ಥಿಗಳು ಇದ್ದೇವು. ಯಾವುದೇ ಘಟನೆಯಾಗದೇ ಇದ್ದರೂ ನಮ್ಮ ಮುಖ್ಯ ಶಿಕ್ಷಕರ ಮತು ಕೇಳಿ ಹಾಗೂ ಆರೋಪಿತರಿಗೆ ಆಗದವರ ಮಾತು ಕೇಳಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ಮತ್ತು ಮುಖ್ಯ ಶಿಕ್ಷಕರು ಹೇಳಿದ ಮೇರೆಗೆ ಆರೋಪಿತರು ನಮ್ಮ ಶಾಲೆಗೆ ಬಂದು ಕಳ್ಳತನ ಮಾಡಿದ ಬಗ್ಗೆ ಒಪ್ಪಿಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಜರ ಮಾಡಿದ ದಿನಾಂಕ ನೆನಪಿಲ್ಲ. ಪಂಚನಾಮೆಯನ್ನು ಯಾರು ಬರೆದರು ಎಂದು ನನಗೆ ಗೊತ್ತಿಲ್ಲ. ಮುಖ್ಯ ಶಿಕ್ಷಕರು ಹೇಳಿದ ಮೇರೆಗೆ ಸಹಿ ಮಾಡಿರುತ್ತೇನೆ. ನಾನು ಪೊಲೀಸರಿಗೆ ಮರು ಹೇಳಿಕೆ ನೀಡಿಲ್ಲ. ಆರೋಪಿತರಿಗೂ, ಮು.ಮಾ ಗೂ ಮತ್ತು ಘಟನೆಗೂ ಸಂಬಂದ ಇಲ್ಲ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು : ಶ್ರೀ.RNB 2 ನೇ ಆರೋಪಿ ಪರ ವಕೀಲರಿಂದ</u>**

1 ಮತ್ತು 3 ನೇ ಆರೋಪಿತರ ಪರ ವಕೀಲರು ಮೇಲಿನಂತೆ ಕೈಗೊಂಡ ಪಾಟೀ ಸವಾಲನ್ನು ಅಳವಡಿಸಿಕೊಂಡಿರುವರು.

ಮರುವಿಚಾರಣೆ ಇಲ್ಲಃ

**( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು )**

ಓ.ಹೇ.ಕೇ. ಸರಿ ಇದೆ,

Sd/-

(ಹುಲುಗಪ್ಪ. ಡಿ )

ಪ್ರಧಾನ  ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ

ನ್ಯಾಯಾಧೀಶರು ರೋಣ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ರೋಣ

ಸಿ.ಸಿ. ನಂ. 198/2021

ಸಿ.ಡಬ್ಲೂಃ 5 ಪಿ.ಡಬ್ಲೂಃ 4

ಹೆಸರುಃ ದ್ಯಾಮಪ್ಪ ಪೂಜಾರ

ತಂದೆಯ ಹೆಸರುಃ ಭೀಮಪ್ಪ

ವಯಸ್ಸುಃ 28 ವರ್ಷ

ಉದ್ಯೋಗಃ ಒಕ್ಕಲುತನ

ವಿಳಾಸಃ ತುಮರಿಕೊಪ್ಪ

**ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 03-06-2026 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಆರೋಪಿತರು ನನಗೆ ಗೊತ್ತಿಲ್ಲ. ಸಾಕ್ಷಿಯು ಆರೋಪಿತರು ಹೇಳಿ ತೋರಿಸಿದ ಘಟನಾ ಜಾಗೆಯ ದಿಃ 14-01-2021 ರ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಪಂಚನಾಮೆಯನ್ನು ನಿ.ಪಿ-4 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ-4(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ಪೊಲೀಸರು ಗಜೇಂದ್ರಗಡದ ಕನ್ನಡ ಶಾಲೆಯ ಹತ್ತಿರ ಪಂಚನಾಮೆ ಮಾಡುವ ಕಾಲಕ್ಕೆ ಮಾಡಿರುತ್ತೇನೆ. ಸಾಕ್ಷಿಯು ಸದರಿ ಪಂಚನಾಮೆ ಕಾಲಕ್ಕೆ ತೆಗೆದ ಪೋಟೊವನ್ನು ನೋಡಿ ಗುರುತಿಸಿದ್ದು, ಸದರಿ ಪೋಟೊವನ್ನು ನಿ.ಪಿ-5 ಎಂದು ಗುರುತಿಸಲಾಯಿತು. ಸದರಿ ಫೋಟೊದಲ್ಲಿ ಕಾಣುವ ಎಡದಿಂದ 3 ನೇ ವ್ಯಕ್ತಿ ಸದರಿ ಸ್ಥಳವನ್ನು ತೋರಿಸಿರುತ್ತಾರೆ. ಅಲ್ಲಿ ಬೆಳೆ ಮತ್ತು ಹಾಲಿನ ಪುಡಿ ಪಾಕೆಟಗಳು ಕಳ್ಳತನವಾಗಿದ್ದವು ಎಂದು ಪಂಚನಾಮೆ ಮಾಡಿರುತ್ತಾರೆ. ಸದರಿ ಪಂಚನಾಮೆಗೆ ನಾವು ಸ್ಥಳದಲ್ಲಿ ಸಹಿ ಮಾಡಿರುತ್ತೇವೆ.

2. ಸಾಕ್ಷಿಯು ಆರೋಪಿತರು ಹೇಳಿ ತೋರಿಸುವ ಕಳ್ಳತನ ಮಾಡಿದ ವಸ್ತುಗಳನ್ನು ಬಚ್ಚಿಟ್ಟ ಜಾಗೆಯ ಮತ್ತು ಆರೋಪಿತರು ಕಳ್ಳತನ ಮಾಡಿದ ವಸ್ತುಗಳ ಜಪ್ತು ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಪಂಚನಾಮೆಯನ್ನು ನಿ.ಪಿ-6 ಎಂದು, ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿ.ಪಿ.6(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಸದರಿ ಪಂಚನಾಮೆ ಕಾಲಕ್ಕೆ ತೆಗೆದ ಪೋಟೋವನ್ನು ನೋಡಿ ಗುರುತಿಸಿದ್ದು, ಸದರಿ ಪೋಟೊವನ್ನು ನಿ.ಪಿ-7 ಎಂದು ಗುರುತಿಸಲಾಯಿತು.

ಸಾಕ್ಷಿಯು ಇನ್ನೊಂದು ಪೋಟೋವನ್ನು ನೋಡಿ ಗುರುತಿಸಿದ್ದು, ಸದರಿ ಪೋಟೊವನ್ನು ನಿ.ಪಿ-8 ಎಂದು ಗುರುತಿಸಲಾಯಿತು. ಸದರಿ ಪಂಚನಾಮೆ ಕಾಲಕ್ಕೆ ಸಿಲಿಂಡರ ಮತ್ತು ಮೈಕನ್ನು ಜಪ್ತುಪಡಿಸಿಕೊಂಡಿರುತ್ತಾರೆ. ಇನ್ನೂಳಿದ ಬಗ್ಗೆ ನನಗೆ ನೆನಪಿರುವುದಿಲ್ಲ.

3. ಸಾಕ್ಷಿಯು ಆರೋಪಿತರು ಹೇಳಿ ತೋರಿಸಿದ ಕಳ್ಳತನ ಮಾಡಲು ಬಳಸಿದ ವಾಹನದ ಜಪ್ತು ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಪಂಚನಾಮೆಯನ್ನು ನಿ.ಪಿ-9 ಎಂದು, ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿ.ಪಿ-9(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಒಂದು ಪೋಟೊವನ್ನು ನೋಡಿ ಗುರುತಿಸಿದ್ದು, ಸದನ್ನು ನಿ.ಪಿ-10 ಎಂದು ಗುರುತಿಸಲಾಯಿತು. ಸದರಿ ಪೋಟೊವನ್ನು ಯಾವಾಗ ಮತ್ತು ಎಲ್ಲಿ ತೆಗೆದಿದ್ದಾರೆ ಎಂದು ನನಗೆ ಈಗ ನೆನಪಿಲ್ಲ. ಇಷ್ಟನ್ನು ಹೊರತುಪಡಿಸಿ ನನಗೆ ಬೇರೆ ಏನು ಗೊತ್ತಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿ ಅವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಕಾರಣ ಅವರ ಮನವಿಯನ್ನು ಆಲಿಸಿ ಪಾಟೀ ಸವಾಲಿಗೆ ಅನುಮತಿಯನ್ನು ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ,**

ದಿಃ17-12-2019 ರಂದು ಗಜೇಂದ್ರಗಡದ ಗೋಗೆರಿ ಗ್ರಾಮದ ಸರಕಾರಿ ಶಾಲೆಯ ಆಫಿಸ ರೂಮನಲ್ಲಿರುವ 185 ಹಾಲಿನ ಪುಡಿ ಪಾಕೆಟಗಳು ಮತ್ತು 20 ಕೆ.ಜಿ ತೊಗರಿ ಬೆಳೆಯನ್ನು ಆರೋಪಿತರು ಸೇರಿ ಕಳ್ಳತನ ಮಾಡಿ ಮಾರಾಟ ಮಾಡಿ ಉಳಿದ ಬೆಳೆ ಮತ್ತು ಹಾಲಿನಪುಡಿ ಪಾಕೆಟಗಳನ್ನು ಗಜೇಂದ್ರಗಡದ ಒಂದು ಪಾಳು ಬಿದ್ದ ಮನೆಯಲ್ಲಿ ಒಗೆದುಹೋಗಿದ್ದು, ನಂತರ ಮುಶಿಗೇರಿ ಗ್ರಾವುದ ಪ್ರಾಥಮಿಕ ಶಾಲೆಯ ಅಡುಗೆ ಕೋಣೆಯಲ್ಲಿಯ 2 ಸಿಲೆಂಡರಗಳನ್ನು ಕಳ್ಳತನ ಮಾಡಿದ್ದು, ಅಲ್ಲದೆ ಸೂಡಿ ಗ್ರಾಮದ ಉರ್ದು ಹಿರಿಯ ಪ್ರಾಥಮಿಕ ಶಾಲೆಯ ಆಫಿಸ ರೂಮನಲ್ಲಿರುವ ಒಂದು 32 inch ನ smart TV ಮತ್ತು Karoka company ಯ ಮೈಕ ಸೆಟ, ಒಂದು bio-matric ಮತ್ತು ಸರಕಾರದಿಂದ ಸರಬರಾಜು ಆಗಿದ್ದ ಹಾಲಿನಪುಡಿ ಪಾಕೆಗಳು ಮತ್ತು ತೊಗೆರೆಬೆಳೆಗಳನ್ನು ಕಳ್ಳತನ ಮಾಡಿದ ಬಗ್ಗೆ ಇದೆ ಸ್ಥಳದಲ್ಲಿ ಕಳ್ಳತನ ಮಾಡಿದ್ದೇವೆ ಎಂದು ಆರೋಪಿತರು ತೋರಿಸಿದ ಜಾಗೆಯ ಪಂಚನಾಮೆ ಕಾಲಕ್ಕೆ ನಾವು ಹಾಜರಿದ್ದು, ಪಂಚನಾಮೆಯನ್ನು ಹೇಳಿ ಬರೆಸಿ ಅದಕ್ಕೆ ನನ್ನ ಸಹಿ ಮಾಡಿರುತ್ತೇನೆ ಎಂದರೆ ಸರಿ. ಆರೋಪಿತರು ಮಾರಾಟ ಆಗದ ಕಾರಣ 2 ಸಿಲೆಂಡರಗಳನ್ನು ಪಾಳು ಬಿದ್ದ ಮನೆಯಲ್ಲಿ ಇಟ್ಟಿರುವುದಾಗಿ, ಒಂದು 32 inch ನ smart TV ಮತ್ತು Karoka company ಯ ಮೈಕ ಸೆಟ, ಒಂದು bio-matric ನೇದ್ದವುಗಳನ್ನು ಒಂದು ಪಾಳು ಬಿದ್ದ ಮನೆಯಲ್ಲಿ ಇಟ್ಟಿರುವುದನ್ನು ಆರೋಪಿತರು ನಮ್ಮ ಸಮಕ್ಷಮ ತೊರಿಸಿದ ಮೇರೆಗೆ ಪಂಚನಾಮೆ ಜರುಗಿಸಿ ನಮ್ಮ ಸಹಿ ಪಡೆದು

ಅವುಗಳನ್ನು ಜಪ್ತುಪಡಿಸಿಕೊಂಡರು ಎಂದರೆ ಸರಿ. ನಂತರ ನಮ್ಮನ್ನು ಗಜೇಂದ್ರಗಡ ಪೊಲೀಸ ಠಾಣೆಗೆ ಕರೆದುಕೊಂಡು ಬಂದು ಆರೋಪಿತರು ಕಳ್ಳತನ ಮಾಡಲು ಉಪಯೋಗಿಸಿದ ವಾಹನವನ್ನು ತೋರಿಸಿದ ಮೇರೆಗೆ ಪೊಲೀಸರು ಪಂಚನಾಮೆ ಜರುಗಿಸಿ ಅದನ್ನು ಜಪ್ತುಪಡಿಸಿಕೊಂಡು ನಮ್ಮ ಸಹಿ ಪಡೆದಿದ್ದಾರೆ ಎಂದರೆ ಸರಿ.

**ಪಾಟೀ ಸವಾಲು : ಶ್ರೀ.SBH 1 ಮತ್ತು 3 ನೇ ಆರೋಪಿತರ ಪರ ವಕೀಲರಿಂದ**

ನಾನು ಶಾಲೆ ಕಲಿತಿಲ್ಲ. ಪಂಚನಾಮೆಗಳಲ್ಲಿ ಏನು ಬರೆದಿದೆ ಎನ್ನುವ ವಿಷಯಗಳ ಬಗ್ಗೆ ನನಗೆ ಗೊತ್ತಿಲ್ಲ. ಪೊಲೀಸರು ಸಹಿ ಮಾಡು ಎಂದು ಹೇಳಿದ ಮೇರೆಗೆ ನಾವು ಪಂಚನಾಮೆಗಳಿಗೆ ಸಹಿ ಮಾಡಿರುತ್ತೇವೆ. ಪಂಚನಾಮೆಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಘಟನೆಯ ಬಗ್ಗೆ ನನಗೆ ಮಾಹಿತಿ ಇಲ್ಲ. ಕಳ್ಳತನ ಯಾರು ಮಾಡಿದ್ದಾರೆ ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ. ಯಾವ ಮುದ್ದೆಮಾಲನ್ನು ಪೊಲೀಸರು ಜಪ್ತುಪಡಿಸಿಕೊಂಡರು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ಮು.ಮಾ ಎಂದರೆ ನನಗೆ ಗೊತ್ತಾಗುವುದಿಲ್ಲ, ಬೆಳೆ, ಹಾಲಿನ ಪುಡಿ ಪಾಕಿಟುಗಳನ್ನು ಜಪ್ತುಪಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಬೆಳೆ, ಹಾಲಿನ ಪುಡಿ ಪಾಕಿಟುಗಳನ್ನು ಯಾರು ಎಲ್ಲಿಂದ ಕಳ್ಳತನ ಮಾಡಿಕೊಂಡು ಬಂದರು ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ. ಸ್ಥಳಕ್ಕೆ ಹೋಗಿದ್ದ ಬಗ್ಗೆ ಪೊಲೀಸರು ನಮ್ಮನ್ನು ಅವರ ಜೊತೆ ನಿಲ್ಲಿಸಿಕೊಂಡು ಫೋಟೊ ತೆಗೆದರು ಎಂದರೆ ಸರಿ. ಪಂಚನಾಮೆಯನ್ನು ಯಾರು ಬರೆದರು ಮತ್ತು ಎಲ್ಲಿ ಬರೆದರು ಎಂದು ನನಗೆ ಮಾಹಿತಿ ಇಲ್ಲ. ಪೊಲೀಸರು ಹೇಳಿದ ಮೇರೆಗೆ ನಾನು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ಆರೋಪಿತರಿಗೆ ಆಗದವರ ಮಾತು ಕೇಳಿ ಯಾವುದೇ ಘಟನೆ ನಡೆಯದಿದ್ದರು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಶ್ರೀ.RNB 2 ನೇ ಆರೋಪಿ ಪರ ವಕೀಲರಿಂದ**

1 ಮತ್ತು 3 ನೇ ಆರೋಪಿತರ ಪರ ವಕೀಲರು ಮೇಲಿನಂತೆ ಕೈಗೊಂಡ ಪಾಟೀ ಸವಾಲನ್ನು ಅಳವಡಿಸಿಕೊಂಡಿರುವರು.

ಮರುವಿಚಾರಣೆ ಇಲ್ಲಃ

**( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು )**

ಓ.ಹೇ.ಕೇ. ಸರಿ ಇದೆ,

(ಹುಲುಗಪ್ಪ. ಡಿ )

ಪ್ರಧಾನ ಸಿವಿಲ್ ಹಾಗೂ

ಜೆ.ಎಮ್.ಎಫ್.ಸಿ

ನ್ಯಾಯಾಧೀಶರು ರೋಣ.